S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್‌ಃ 16/2025

**ಚಾ.ಸಾ.–03 ಪ್ರಾ.ಸಾ.–03**

| | |
|---|---|
| **ಸಾಕ್ಷಿದಾರರ ಹೆಸರು** | **ಪುನೀತ್ ಕುಮಾರ್** |
| **ತಂದೆಯ ಹೆಸರು** | **ರಾಮು** |
| **ವಯಸ್ಸು** | **28 ವರ್ಷಗಳು** |
| **ಉದ್ಯೋಗ** | **ಪೇಂಟ್ ಕೆಲಸ** |
| **ವಾಸ** | **ಚಾಮನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು.** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 1 ,2 ರವರ ಪರಿಚಯ ಇದೆ. ನಾವು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದೇನೆ. ಚಸಾ 4 ರಿಂದ 12 ಪರಿಚಯ ಇದ್ದಾರೆ. ಅವರು ನಮ್ಮ ಗ್ರಾಮದವರು. ಆರೋಪಿತರ ಪರಿಚಯ ಇದೆ. ಅವರು ನಮ್ಮ ಗ್ರಾಮದವರು. ಅವರು ಒಕ್ಕಲಿಂಗ ಜನಾಂಗದವರು. ಆರೋಪಿತರುನನಗೆ , ಚಾಸಾ 1 ರವರಿಗೆ ಯಾವುದೆ ತೊಂದರೆ ಕೊಟ್ಟಿಲ್ಲ, ಬೈದಿಲ್ಲ ಹೊಡೆದಿಲ್ಲ , ಜಾತಿ ನಿಂದನೆ ಮಾಡಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ಹೊಡೆದಿದ್ದಾರೆ ಎಂದು ಯಾವುದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ**

**ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.**)

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2) ದಿಃ13.12.2024 ರಂದು ರಾತ್ರಿ 8.30 ಸಮಯದಲ್ಲಿ ಚಾಸಾ 1, 2 ರವರು ಆರೋಪಿ 1ರವರ ಬಳಿ ಕೂಲ್ ಡ್ರಿಂಕ್ಸ್ ಮತು ಸಿಗರೇಟು ಕೇಳಿದೆವು ಎಂದರೆ ಸರಿಯಲ್ಲ. ಆಗ ಆರೋಪಿ 1 , 2 ದುಡ್ಡು ಕೇಳಿದ್ದರಿಂದ ನಾವು ಇದೇ ಊರಿನವರು ನಾವು ಎಲ್ಲಿ ಹೋಗುತ್ತೇವೆ , ತಂದುಕೊಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ 1 , 2 ಅವರನ್ನು ಉದ್ದೇಶಿಸಿ ನೀವು ಮಾದಿಗರು ನಮ್ಮ ಅಂಗಡಿಗೆ ಬರಬೇಡಿ ಎಂದು ಜಾತಿ ನಿಂದನೆ ಮಾಡಿದರು ಎಂದರೆ ಸರಿಯಲ್ಲ. ಅಲ್ಲದೆ ನಿಮಗೆ ಎಷ್ಟು ಧಿಮಾಕು ನೀವು ಮಾದಿಗರಲ್ಲದೆ ಇನ್ಯಾರು ಮಾದಿಗರನ್ನು ಮಾದಿಗರು ಎಂದು ಕರೆದರೆ ಏನು ಮಾಡ್ಕೊತ್ತೀರ ಎಂದು ಬೈದಿದ್ದಾರೆ ಎಂದರೆ ಸರಿಯಲ್ಲ. ಅಲ್ಲದೆ ಮಾದಿಗಸೂಳೆಮಕ್ಕಳ ಬೋಳಿಮಕ್ಕಳ ಎಂದು ಬೈದಿದ್ದಾರೆ ಎಂದರೆ ಸರಿಯಲ್ಲ. ಇದೇ ಸಮಯಕ್ಕೆ ಆರೋಪಿ 3 ರಿಂದ 9 ಅಲ್ಲಿ ಬಂದರು ಎಂದರೆ ಸರಿಯಲ್ಲ. ಅವರು ಕೂಡ ಏಕಾಏಕಿ ಸಾಕ್ಷಿ 1 , 2 ರನ್ನು ಎಳೆದಾಡಿ , ತಳ್ಳಾಡಿ ಮಾದಿಗ ಸೂಳೆಮಕ್ಕಳ ಎಂದು ಬೈದು ಕೊಲೆ ಮಾಡಿ ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಚಾಸಾ 1 ರವರನ್ನು ಕೆಳಗಿ ಕೆಡವಿ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ಅವರ ತಲೆಗೆ ಎದೆಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಈ ಕೃತ ನಡೆದ ಸ್ಥಳದಲ್ಲಿ ಅಳವಡಿಸಿದ್ದ ಸಿಸಿ ಟಿವಿಯ ಡಿವಿಆರ್ ಅನ್ನು ಆರೋಪಿ 2 ನಾಶಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಸಾ 1 ರವರು ಈ ಬಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡರು ಎಂದರೆ ಸರಿಯಲ್ಲ. ಘಟನೆಯನ್ನು ನಾನು ದೀಪದ ಬೆಳಕನಲ್ಲಿ ನೋಡಿದ್ದೆ ಎಂದರೆ ಸರಿಯಲ್ಲ.

3) ಈ ಬಗ್ಗೆ ದಿ.17.12.2024 ರಂದು ಈಗ ಓದಿ ಹೇಳಿದಂತೆ ದಿಃ 13.12.2024 ರಂದು ---------------- ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.6** ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದರ ನಂ. 66/25 ಆಗಿರುತ್ತದೆ ಎಂದರೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ಸಾಕ್ಷಿ ಹೇಳಿದರೆ ಅವರು

ಹಾಕಿರುವ ಪ್ರಕರಣದಲ್ಲಿ ನನಗೆ ತೊಂದರೆಯಾಗುತ್ತದೆ ಎಂದು ತಿಳಿದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ  ಆರೋಪಿತರ ಪರ ವಕೀಲರಿಂದಃ**

4)  ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ